ಬಾಲ್ಯ ಸವಿದ ಗಮಾರರು ನಾವು. ಆರು ದಶಕಗಳ ಹಿಂದೆ, ಹಳ್ಳಿಯೊಂದರ ಸರಕಾರಿ ಪ್ರಾಥಮಿಕ ಏಕೋಪಾಧ್ಯಾಯ ಶಾಲೆಯಲ್ಲಿ ನಾನು ಓದಿ ಬೆಳೆದವನು. ಆವಾಗಿನ ದಿನಗಳಲ್ಲಿ ಶಿಕ್ಷಕರೆಂದರೆ, ನಮ್ಮ ಪಾಲಿಗೆ ಸಾರ್ವಭೌಮ ಸಾಮ್ರಾಟರೇ ಸೈ. ಆಲಿವರ್ ಗೋಲ್ಡ್‌ಸ್ಮಿತ್‌ನ 'ವಿಲೇಜ್ ಸ್ಕೂಲ್‌ಮಾಸ್ಟರ್' ಕವಿತೆಯನ್ನು ನೆನಪಿಸುವಂಥ ನಮ್ಮ ಶಿಕ್ಷಕರು. ಅವರ ಮುಂದೆ ನಿಂತು ಮಾತಾಡುವುದಂತೂ ದೂರವೇ ಉಳಿಯಿತು, ಊರಲ್ಲಿ ಎಲ್ಲಿಯಾದರೂ ಅವರ ಕಣ್ಣಿಗೆ ಬಿದ್ದರೆ, ಮರುದಿನ ಶಾಲೆಯಲ್ಲಿ ಅದರ ವಿಚಾರಣೆ. 'ಅಷ್ಟೊತ್ತಿನೊಳಗ ಅಲ್ಲಿಗ್ಯಾಕ ಹೋಗಿದ್ದಿ? ಏನ ಕೆಲ್ಸ ಇತ್ತು? ಓದೋದು ಬಿಟ್ಟು ಹರಾಮಿ ಹರಗಾಡ್ತಿ?' ಅಂತೆಲ್ಲ ಪೊಲೀಸ್ ವಿಚಾರಣೆ. ನಾವು ಸುಳ್ಳು ಸೊಟ್ಟು ಹೇಳಿದೆವೆಯೊ, ಬಂತು ಗ್ರಹಚಾರ ಅಂತ್ಲೆ ತಿಳಿದುಕೊಳ್ಳಬೇಕು.

'ಮಗನಾ, ಸುಳ್ಳ ಬೊಗಳ್ತೀ...' ಹೊಡೀಲಿಕ್ಕೆ ಸುರುಮಾಡಿದರೆ... ಚಡ್ಡಿಯೊಳಗೆ ಉಚ್ಚಿ ಹೊಯ್ಕೊಬೇಕು. ಇಂತಿಪ್ಪ ಮಾಸ್ತರರ ಬೋಧನೆಗೆ ನಿರ್ದಿಷ್ಟವಾದ ವೇಳಾಪಟ್ಟಿ ಇರುತ್ತಿರಲಿಲ್ಲ. ಅವರು ಅನುಗ್ರಹಿಸಿದಾಗಲೇ ವಿಶ್ರಾಂತಿಯೂ, ವಿಸರ್ಜನ ಕಾರ್ಯವೂ...

ಗೋಪಾಲಕೃಷ್ಣ ಕಿರುಬೆರಳಿನಿಂದ ಗೋವರ್ಧನಗಿರಿ ಎತ್ತಿ ಹಿಡಿದಂತೆ, ನಾವು ಕಿರುಬೆರಳು ತೋರಿಸುತ್ತ, ಮಾಡಿದ ಕೈಸನ್ನೆ ಅಪೀಲ್‌ನ್ನು, ನಿರ್ದಯದಿಂದ ತಳ್ಳಿಹಾಕುತ್ತ, 'ನಾಯಿ ಜಾತ್ಯಾವ್ರೇನ್ಲೆ ಕುಡುಸಾಲ್ಯಾಗೊಳಯರ್ಾ... ಎಷ್ಟ ಸಲಾಯರ್ೋ ಅದು ಒಂದಕ್ಕ ಹೋಗೋದು?...' ಮಾಸ್ತರರು ಕಣ್ಣುಕಿಸಿದು ಕೇಳೋರು.

ಆವಾಗಿನ ನಮ್ಮ ಸಂಕಟ ದೇವರಿಗೇ ಪ್ರೀತಿ. 'ಒಂದ್ಯೆದ ನಿಮಿಷ ತಡ್ಕೊಂಡ್ರ, ನಿಮ್ ಜೀಂವಾಏನೂ ಹಾರಿಹೋಗೋದಿಲ್ಲಾ... ಕುಕ್ಕರ ಬಡ್ರೀಲೇ ಬಿಕನಾಸಿಗೊಳಾ' ಎಂದು ಗುಟುರು ಹಾಕಿದರಂತೂ... ಸಾಂಬಹರಾ! ಅದು ಮಾರ್ಷಲ್ ಲಾ. ಮೀರೊ ಹಾಗಿಲ್ಲ. ಆ 'ಒಂದ್ಯೆದ ನಿಮಿಷ' ತೊಡೆ ಬಿಗಿಮಾಡಿಕೊಂಡು, ಕಿಬ್ಬೊಟ್ಟೆ ಒತ್ತಿ ಹಿಡಿಯುತ್ತ, ಗಳಿಗಳಿಗೊಮ್ಮೆ ಮುಖ ಕಿವುಕಿವುಚುತ್ತ, ಅತ್ತಿತ್ತ ಕತ್ತು ಹೊರಳಾಡಿಸೋರು. ತುಟಿ ಕಚ್ಚಿಕೊಂಡು, ಕಾಯ್ದ ತವ್ವೆಯ ಮೇಲೆ ಕಾಲಿಟ್ಟವರಂತೆ, ಮೂತ್ರದೊತ್ತಡದ ರಾಗವೇಗಗಳ ಚಡಪಡಿಕೆ...

ಕುಳಿಕುಳಿತಲ್ಲಿಯೇ ಎಲ್ಲಿ 'ಏಕೀಕರಣ' ಮಾಡಿಬಿಟ್ಟಾವು ಮುಂಡೆಗಂಡ್ರು ಎಂಬ ಅಂಜಿಕೆ ಮಾಸ್ತರರಲ್ಲೂ. ಒಂದೆರಡು ಸಲ ಅದೂ ಆಗಿತ್ತು. ಅದುವೇ ಕಾರಣವಾಗಿ ನಮ್ಮತ್ತ ಕಿರುನಗೆ ಬೀರುತ್ತ, 'ಅದೇನು ಗೋಕರ್ಣದ ಸಮುದ್ರಾನೇ ಹೊಟ್ಯಾಗ ಹೊಕ್ಕವರಂಗ ಮಾಡತೀಯರ್ೋ ಕುಡಸಾಲ್ಯಾಗೋಳ್ರ್ಯಾ! ಹೂಂ... ಜಲ್ದೀ ಜಲ್ದೀ ಹೊಯ್ಕೊಂಡ ಬರ್ರೀ, ಗಣೀತ ಲೆಕ್ಕಾ ಬಿಡಸೂದು ಹಂಗೇ ಉಳದದ' ಎಂದು ಅವರು ಹೇಳೋದೇ ತಡ...

ಪೆರೋಲ್ ಮೇಲೆ ಬಿಡುಗಡೆಯಾದ ಅಮಿತೋತ್ಸಾಹದಲ್ಲಿ, ಶಾಲೆಯ ಹಿಂದಿದ್ದ ಬಳ್ಳಾರಿ ಜಾಲಿಕಂಟಿಗಳ ದಟ್ಟ ಪೊದರಿನತ್ತ, ನಾ ಮುಂದೆ, ನಾ ಮುಂದೆ ಎಂದು ಸರಭಸದಿಂದ ಓಡೋಡೋಡಿ, 'ಧನ್ಯವಾಯಿತದೊ ಸಸ್ಯಶಾಮಲೆ ಮೂತ್ರಸಿಂಚನದಿಂ' ಎಂದು ನಾವು ನಾವೇ ಹೊಸೆದಿದ್ದ ಕೋರಸ್ ಹಾಡುತ್ತ 'ಯೂಚಿಸ್' (ಇಂಗ್ಲಿಷಿನ ಯೂರಿನಲ್ಸ್ ಮತ್ತು ಕನ್ನಡದ ಉಚ್ಚಿ ಎರಡನ್ನೂ ಮಿಕ್ಸ್ ಮಾಡಿ, ನಾವೇ ಕೊಟ್ಟಿದ್ದ ಕನ್ನಡಾಂಗ್ಲ ಪದ) ಮುಗಿಸುತ್ತಿದ್ದೆವು.

ಮುಂದೆ, ಈ ಅನುಭವದಿಂದ ಹುಷಾರಾದ ನಾವು, ಒಮ್ಮೊಮ್ಮೆ ಮೂತ್ರದೊತ್ತಡ ಇರದಿದ್ದರೂ, ಕಿರುಬೆರಳನೆತ್ತುವ ಮೂಲಕ ನಿರೀಕ್ಷಣಾ ಜಾಮೀನಿಗೆ ಮನವಿ ಸಲ್ಲಿಸುವುವಷ್ಟು ಕುಶಾಗ್ರಮತಿಗಳಾದೆವು. ನಮ್ಮ ಮನವಿಗೆ ಮಾಸ್ತರು, ಹೆಚ್ಚು ಕಡಿಮೆ ಅರ್ಥತಾಸಿನ ಅನಂತರ ಮಂಜೂರಾತಿ ನೀಡುತ್ತಿದ್ದರು. ಅಷ್ಟೊತ್ತಿಗೆ, ಕರೆಯ ಅಗತ್ಯ ಸಣ್ಣಗೆ ಚುರುಕುಗೊಂಡಿರುತ್ತಿತ್ತು.

★★★